<u>ಅಸಲು ದಾವಾ:-</u> 196/15 ಡಿ.ಡಬ್ಲ್ಯೂ:-01

ದಿನಾಂಕ: 02.12.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ವಾದಿ ಪರ ಶ್ರೀ.ಎಸ್ ಎನ್ ಪಿ ವಕೀಲರಿಂದ</u>

ವಾದಿ ನನಗೆ ಏನು ಸಂಬಂಧ ಆಗಬೇಕು ಎಂದರೆ ಯಾವುದೇ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನಗೆ ಮಂಜೂರಾಗಿದೆ ಎಂದು ತೋರಿಸಲು ಹಕ್ಕು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯು ಸರ್ಕಾರದಿಂದ ವಾದಿಗೆ ಮಂಜೂರಾದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತೆ ಮಂಜೂರಾದ ದಿನಾಂಕದಿಂದ 2018-19 ರಿಂದ ವಾದಿಯ ಹೆಸರಿಗೆ ಇದೆ ಎಂದರೆ ಸರಿಯಲ್ಲ. 2020 ರಲ್ಲಿ ಪಂಚಾಯಿತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಾನು ದಾವಾ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಇದ್ದಂತಹ ಖಾತೆಯನ್ನು ಪಂಚಾಯಿತಿ ಅಧಿಕಾರಿಗಳು ಈಗ ನಿಡಿ-19 ರಂತೆ ವಾದಿಯ ಹೆಸರಿಗೆ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನಗೆ ಸೇರಿದಲ್ಲ ಹಾಗೂ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ಸೇರಿದ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ತಕಾರರು ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ